


# ಜರಡಿ

ಎಸ್. ವಿಷ್ಣುಕುಮಾರ್

ದೂರದಿಂದ ಬಂದ ದಾರಿ
ದಣಿದು ಮೈಚೆಲ್ಲಿ ಕುಳಿತಿದೆ
ಸ್ವಲ್ಪಹೊತ್ತಿನ ಮಾತುಕತೆಗೆ
ಡಬ್ಬದಲ್ಲಿ ಜರಡಿ ಮಾಡುತ್ತಿರುವ
ಮುದುಕ ದಂಪತಿಯ ಜೊತೆಗೆ

ಪಕ್ಕದಲ್ಲಿ ಹಳೆಯ ಬಟ್ಟೆ
ಗಂಟು ಮುಖದ ಮುದುಕ
ಸುತ್ತ ಬಳಸಿ ಬಿಟ್ಟ
ಯಂಗಾರ ಆಗಲಿ ಇರಲಿ
ಎಂದು ಇಟ್ಟ ಡಬ್ಬಗಳು
ಕತ್ತರಿಸಿ ಅವನ್ನೇ ದುಂಡಗೆ
ಜರಡಿ ಮಾಡುತ್ತಿದ್ದಾನೆ

ಕಣ್ಣು ಸಣ್ಣಗೆ ಮಾಡಿ –ಮುದುಕಿಯ ಆತಂಕ
ನುಸಿ ನೊರಜು ಮಾತ್ರ ಇಳಿಯಲಿ
ಉಂಡುಗಾಳು ಉಳಿಯಲಿ
ಒಮ್ಮೆ ಕತ್ತೆತ್ತಿ ಮತ್ತೆ ಕಣ್ಣು ಕೊರೆವ
ಸುಳಿಗೆ ಕಣ್ಣೆಳಿಸಿದ ಮುದುಕ
ಜರಡಿ ಇರುವುದೇ ಕಳೆದದ್ದನ್ನು
ಉಳಿದದ್ದನ್ನು ಬೇರೆ ಮಾಡುವುದಕ್ಕೆ
ಕಣ್ಣು ಬಿಟ್ಟಮೇಲೆ ಕಳೆವುದೊಂದೇ ಲೆಕ್ಕ

ಇನ್ನೇನು ಆಯಿತು ಸಂಜೆ
ಸಂತೆ ಮುಗಿಯುತ್ತಿದೆ
ಯಾವ ಕೈಯಾದರೂ ಎತ್ತಿಕೊಂಡರೆ ಹೇಗೆ
ಕಾಣಿಸುತ್ತದೆಂದು ಜರಡಿಯ ಮುಂದೆ ಹಿಡಿದ
ಎದುರಿಗೆ ತಾತಾತೂತು ಜಗತ್ತು!
ಮುದುಕಿ ಆಗಲೇ ಗಂಟು ಕಟ್ಟುತ್ತಿತ್ತು.

● ಎಸ್. ನಟರಾಜ ಬೂದಾಳು